# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 433

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ

ಉತ್ತರಿಸುವ ದಿನಾಂಕ : 07-12-2023

ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸರ್ಕಾರಿ ಸ್ವಾಯತ್ತ ನಿಗಮ ಮಂಡಳಿಗಳು ಮತ್ತು ಸರ್ಕಾರದ ಅಧೀನದಲ್ಲಿ ಬರುವ ಸ್ವಾಯತ್ತ ಸಂಸ್ಥೆಗಳಲ್ಲಿ ಇಲ್ಲಿಯವರೆಗೆ | ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಗಳು, ಸಹಕಾರಿ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ಬೆಂಗಳೂರು, ದಿನಾಂಕ: 21.11.2001 ಮತ್ತು ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ಬೆಂಗಳೂರು, ದಿನಾಂಕ: 01.06.2002 ರನ್ವಯ 2001 ಮತ್ತು 2001 ನಂತರದಲ್ಲಿ ಪರಿಶಿಷ್ಟ ಜಾತಿಯ 16413 ಮತ್ತು ಪರಿಶಿಷ್ಟ ಪಂಗಡದ 4963 ಒಟ್ಟು 21376 ಹುದ್ದೆಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ ಇಲ್ಲಿಯವರೆಗೆ ಪರಿಶಿಷ್ಟ ಜಾತಿ –14932 ಮತ್ತು ಪರಿಶಿಷ್ಟ ಪಂಗಡ - 4341 ಒಟ್ಟು 19273 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br><br>ಕೆಲವು ಸಂಸ್ಥೆಗಳು ಮುಚ್ಚಲ್ಪಟ್ಟ ಹಾಗೂ ಆರ್ಥಿಕ ಸಂಕಷ್ಟದ ಕಾರಣಗಳಿಂದ 2015 ರಿಂದ ಪರಿಶಿಷ್ಟ ಜಾತಿ-117 ಹಾಗೂ ಪರಿಶಿಷ್ಟ ಪಂಗಡ-48 ಒಟ್ಟು 165 ಹುದ್ದೆಗಳಿಗೆ ಭರ್ತಿಯಿಂದ ವಿನಾಯಿತಿ ನೀಡುವಂತೆ ಕೋರಲಾಗಿದೆ. ದಿನಾಂಕ: 21.06.2022 ರ ಉಪಸಮಿತಿ ಸಭೆಯಲ್ಲಿ ಪರಿಶಿಷ್ಟ ಜಾತಿ – 479 ಮತ್ತು ಪರಿಶಿಷ್ಟ ಪಂಗಡ -151 ಒಟ್ಟು 630 ಹುದ್ದೆಗಳಿಗೆ ಭರ್ತಿಯಿಂದ ವಿನಾಯಿತಿ ಕೋರಲಾಗಿತ್ತು. ಒಟ್ಟಾರೆಯಾಗಿ ಪರಿಶಿಷ್ಟ ಜಾತಿಯ-596, ಪರಿಶಿಷ್ಟ ಪಂಗಡದ-199 ಒಟ್ಟು 795 ಬ್ಯಾಕ್‌ಲಾಗ್ ಹುದ್ದೆಗಳಿಗೆ ಭರ್ತಿಯಿಂದ ವಿನಾಯಿತಿ ನೀಡುವಂತೆ ಸಚಿವ ಸಂಪುಟದ |

ಉಪ ಸಮಿತಿಯನ್ನು ಕೋರಲಾಗಿದೆ.

ಪ್ರಸ್ತುತ 18 ಇಲಾಖೆಗಳಲ್ಲಿ ಪರಿಶಿಷ್ಟ ಜಾತಿಯ 798 ಮತ್ತು ಪರಿಶಿಷ್ಟ ಪಂಗಡದ 441 ಒಟ್ಟು 1239 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

**ವಿವಿಧ ಇಲಾಖೆ/ನಿಗಮ/ ಮಂಡಳಿ/ ಸಹಕಾರ ಸಂಸ್ಥೆ/ ವಿಶ್ವವಿದ್ಯಾಲಯಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಕ್ಷಿಪ್ತ ವಿವರ (ದಿನಾಂಕ: 12.10.2023ರಲ್ಲಿದ್ದಂತೆ)**

| ಕ್ರ. ಸಂ | ವಿಷಯ | 2001 ರವರೆಗೆ | | | 2001ರ ನಂತರ | | | ಒಟ್ಟು | | |
|---|---|---|---|---|---|---|---|---|---|---|
| | | ಪ.ಜಾತಿ | ಪ.ಪಂ | ಒಟ್ಟು | ಪ.ಜಾತಿ | ಪ.ಪಂ | ಒಟ್ಟು | ಪ.ಜಾತಿ | ಪ.ಪಂ | ಒಟ್ಟು |
| 1 | ಗುರುತಿಸಲಾದ ಒಟ್ಟು ಹುದ್ದೆಗಳು | 14624 | 4491 | 19115 | 1789 | 472 | 2261 | 16413 | 4963 | 21376 |
| 2 | ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು | 13475 | 4031 | 17506 | 1544 | 292 | 1836 | 15019 | 4323 | 19342 |
| 3 | ಭರ್ತಿಯಿಂದ ವಿನಾಯಿತಿ ನೀಡಲಾದ ಹುದ್ದೆಗಳು | 117 | 48 | 165 | 0 | 0 | 0 | 117 | 48 | 165 |
| 4 | ದಿ:21.06.2022ರ ಉಪಸಮಿತಿಯಲ್ಲಿ ಭರ್ತಿಯಿಂದ ವಿನಾಯಿತಿ ಕೋರಿರುವ ಹುದ್ದೆಗಳು | 479 | 151 | 630 | 0 | 0 | 0 | 479 | 151 | 630 |
| | **ಒಟ್ಟು** | **596** | **199** | **795** | **0** | **0** | **0** | **596** | **199** | **795** |
| 5 | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು | 553 | 261 | 814 | 245 | 180 | 425 | 798 | 441 | 1239 |

ಇಲಾಖಾ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

| | | |
|---|---|---|
| ಆ) | ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುವುದರಲ್ಲಿ ಸರ್ಕಾರದ ಕ್ರಮವೇನು; | ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಉಸ್ತುವಾರಿಗಾಗಿ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪಸಮಿತಿ ಸಭೆಯನ್ನು ರಚಿಸಲಾಗಿದೆ. ಸದರಿ ಸಚಿವ ಸಂಪುಟ ಉಪಸಮಿತಿ ಸಭೆಯು ದಿನಾಂಕ: 21.06.2022, 16.11.2022 ಮತ್ತು 12.10.2023 ರಂದು ನಡೆದಿದ್ದು, ಸದರಿ ಸಭೆಯಲ್ಲಿ ವಿವಿಧ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ನಿರ್ದೇಶನ ನೀಡಲಾಗಿದೆ.<br><br>ಮುಂದುವರೆದು, ಸಮಾಜ ಕಲ್ಯಾಣ ಇಲಾಖೆಯಿಂದ ದಿನಾಂಕ:03.12.2022, 09.01.2023, 02.03.2023, 12.04.2023, 17.04.2023, 22.05.2023, 18.07.2023, 26.09.2023 ಮತ್ತು 20.11.2023 ರಲ್ಲಿ ಎಲ್ಲಾ ಇಲಾಖೆಗಳಿಗೆ ಪತ್ರ ಬರೆದು ಪ್ರಥಮ ಆದ್ಯತೆಯ ಮೇರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವಂತೆ ಸೂಚನೆ ನೀಡಲಾಗಿದೆ.<br><br>ಪ್ರತಿವಾರ ನಡೆಯುವ ಕರ್ನಾಟಕ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಸಮಿತಿ ಸಭೆಯಲ್ಲಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಶೀಘ್ರವಾಗಿ ತುಂಬುವಂತೆ ನಿರ್ದೇಶನ ನೀಡಲಾಗುತ್ತಿದೆ.<br><br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಪ್ರತಿವಾರ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳೊಂದಿಗೆ ಸಭೆ ನಡೆಸಿ ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಕೂಡಲೇ ಭರ್ತಿ ಮಾಡುವಂತೆ ಸೂಚನೆ ನೀಡುತ್ತಿದ್ದು, ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ಇಲ್ಲಿಯವರೆಗೂ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಎಷ್ಟು ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ; ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು; | 2001 ಮತ್ತು 2001 ನಂತರದಲ್ಲಿ ಪರಿಶಿಷ್ಟ ಜಾತಿಯ 16413 ಮತ್ತು ಪರಿಶಿಷ್ಟ ಪಂಗಡದ 4963 ಒಟ್ಟು 21376 ಹುದ್ದೆಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ ಇಲ್ಲಿಯವರೆಗೆ ಪರಿಶಿಷ್ಟ ಜಾತಿ – 15019 ಮತ್ತು ಪರಿಶಿಷ್ಟ ಪಂಗಡ - 4323 ಒಟ್ಟು 19324 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. (ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ) |
| ಈ) | ಪ್ರಸ್ತುತ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ಯಾವ ಕಾಲಮಿತಿಯಲ್ಲಿ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳುವುದು? | ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಕಾಲಮಿತಿಯೊಳಗೆ ಭರ್ತಿ ಮಾಡುವಂತೆ ಸುತ್ತೋಲೆಗಳನ್ನು ಹೊರಡಿಸಲಾಗಿದೆ. (ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 658 ಸೇನೇನಿ 2018, ದಿನಾಂಕ: 27.12.2018 ರಲ್ಲಿ ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 658 ಸೇನೇನಿ 2018 ದಿನಾಂಕ:24.01.2019).<br><br>ಪ್ರತಿವಾರ ನಡೆಯುವ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಸಮಿತಿ ಸಭೆಯಲ್ಲಿ ಹಾಗೂ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಪ್ರತಿವಾರ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳೊಂದಿಗೆ ಸಭೆ ನಡೆಸಿ ಎಲ್ಲಾ ಇಲಾಖೆಗಳಿಂದ ಬ್ಯಾಕ್ ಲಾಗ್ ಹುದ್ದೆಗಳ ಬಗ್ಗೆ ಪರಿಶೀಲನೆ ನಡೆಸಿ ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ಸೂಚನೆಯನ್ನು ನೀಡುತ್ತಿದ್ದು, ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕ್ರಮವಹಿಸಲಾಗುತ್ತಿದೆ. |

**SWD/481/SLP/2023**

**(ಡಾ.ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.

ಅನುಬಂಧ-1

ಸರ್ಕಾರದ ವಿವಿಧ ಇಲಾಖೆಗಳು/ ನಿಗಮಗಳು/ಮಂಡಳಿಗಳು/ವಿಶ್ವವಿದ್ಯಾಲಯಗಳು/ಸಹಕಾರ ಸಂಸ್ಥೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ಇಲಾಖೆ/ನಿಗಮ/ ಮಂಡಳಿ/ವಿಶ್ವವಿದ್ಯಾಲಯ/ಸಹಕಾರ ಸಂಸ್ಥೆಗಳು ಇತ್ಯಾದಿ | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ (2001 ರಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ) | | | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ (2001 ರ ನಂತರ ಗುರುತಿಸಿರುವ ಹುದ್ದೆಗಳ ಸಂಖ್ಯೆ) | | | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|---|---|---|
| | | ಪ.ಜಾ | ಪ.ಪಂ | ಒಟ್ಟು | ಪ.ಜಾ | ಪ.ಪಂ | ಒಟ್ಟು | |
| 1 | 2 | 3 | 4 | 5 | 6 | 7 | 8 | 9 |
| 1 | ಉನ್ನತ ಶಿಕ್ಷಣ ಇಲಾಖೆ | 192 | 219 | 411 | 77 | 71 | 148 | 559 |
| 2 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 140 | 13 | 153 | 0 | 67 | 67 | 220 |
| 3 | ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆ | 182 | 2 | 184 | 0 | 0 | 0 | 184 |
| 4 | ಸಾರಿಗೆ ಇಲಾಖೆ | 0 | 0 | 0 | 151 | 26 | 177 | 177 |
| 5 | ನಗರಾಭಿವೃದ್ಧಿ ಇಲಾಖೆ | 5 | 2 | 7 | 0 | 1 | 1 | 8 |
| 6 | ಸಹಕಾರ ಇಲಾಖೆ | 6 | 1 | 7 | 0 | 0 | 0 | 7 |
| 7 | ತೋಟಗಾರಿಕೆ ಇಲಾಖೆ | 0 | 0 | 0 | 5 | 1 | 6 | 6 |
| 8 | ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ | 10 | 1 | 11 | 0 | 0 | 0 | 11 |
| 9 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 2 | 1 | 3 | 7 | 12 | 19 | 22 |
| 10 | ಅರಣ್ಯ ಇಲಾಖೆ | 0 | 0 | 0 | 0 | 1 | 1 | 1 |
| 11 | ವೈದ್ಯಕೀಯ ಶಿಕ್ಷಣ ಇಲಾಖೆ | 3 | 8 | 11 | 0 | 0 | 0 | 11 |
| 12 | ಕೃಷಿ ಇಲಾಖೆ | 8 | 8 | 16 | 0 | 0 | 0 | 16 |
| 13 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 3 | 2 | 5 | 1 | 0 | 1 | 6 |
| 14 | ಒಳಾಡಳಿತ ಇಲಾಖೆ | 2 | 3 | 5 | 0 | 0 | 0 | 5 |
| 15 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 0 | 0 | 0 | 2 | 0 | 2 | 2 |
| 16 | ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ | 0 | 0 | 0 | 1 | 1 | 2 | 2 |
| 17 | ಕಂದಾಯ ಇಲಾಖೆ | 0 | 1 | 1 | 0 | 0 | 0 | 1 |
| 18 | ರೇಷ್ಮೆ ಇಲಾಖೆ | 0 | 0 | 0 | 1 | 0 | 1 | 1 |
| | ಒಟ್ಟು | 553 | 261 | 814 | 245 | 180 | 425 | 1239 |

ಅನುಬಂಧ-2

**ವಿವಿಧ ಇಲಾಖೆ/ ನಿಗಮ/ ಮಂಡಳಿ/ ಸಹಕಾರ ಸಂಸ್ಥೆ/ ವಿಶ್ವವಿದ್ಯಾಲಯಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಸಂಕ್ಷಿಪ್ತ ವಿವರ (ದಿನಾಂಕ :10.10.2023 ರಲ್ಲಿದ್ದಂತೆ)**

| ಕ್ರ. ಸಂ | ವಿಷಯ | 2001 ರವರೆಗೆ | | | 2001 ರ ನಂತರ | | | ಒಟ್ಟು | | |
|---|---|---|---|---|---|---|---|---|---|---|
| | | ಪ.ಜಾ. | ಪ.ಪಂ | ಒಟ್ಟು | ಪ.ಜಾ. | ಪ.ಪಂ | ಒಟ್ಟು | ಪ.ಜಾ. | ಪ.ಪಂ | ಒಟ್ಟು |
| 1 | ಗುರುತಿಸಲಾದ ಒಟ್ಟು ಹುದ್ದೆಗಳು | 14624 | 4491 | 19115 | 1789 | 472 | 2261 | 16413 | 4963 | 21376 |
| 2 | ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು | 13475 | 4031 | 17506 | 1544 | 292 | 1836 | 15019 | 4323 | 19342 |
| 3 | ಭರ್ತಿಯಿಂದ ವಿನಾಯಿತಿ ನೀಡಲಾದ ಹುದ್ದೆಗಳು | 117 | 48 | 165 | 0 | 0 | 0 | 117 | 48 | 165 |
| 4 | ದಿ: 21.06.2022ರ ಉಪಸಮಿತಿಯಲ್ಲಿ ಭರ್ತಿಯಿಂದ ವಿನಾಯಿತಿ ಕೋರಿರುವ ಹುದ್ದೆಗಳು | 479 | 151 | 630 | 0 | 0 | 0 | 479 | 151 | 630 |
| | ಒಟ್ಟು | 596 | 199 | 795 | 0 | 0 | 0 | 596 | 199 | 795 |
| 5 | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು | 553 | 261 | 814 | 245 | 180 | 425 | 798 | 441 | 1239 |